# ಮರಳಿಬಂದ ಸ್ಪೈಡರ್‌ಮ್ಯಾನ್



ಹಾಲಿವುಡ್‌ನ ಸೂಪರ್‌ಹೀರೊ ಸ್ಪೈಡರ್‌ಮ್ಯಾನ್ ಮತ್ತೆ ಬಂದಿದ್ದಾನೆ– ಈ ಸಲ 'ಸ್ಪೈಡರ್‌ಮ್ಯಾನ್: ಫಾರ್ ಫ್ರಂ ಹೋಮ್' ರೂಪದಲ್ಲಿ. 2017ರಲ್ಲಿ ತೆರೆಗೆ ಬಂದ 'ಸ್ಪೈಡರ್‌ಮ್ಯಾನ್: ಹೋಮ್ ಕಮಿಂಗ್'ನ ಮುಂದುವರಿದ ಕಥೆಯಿದು. ಜಾನ್ ವ್ಯಾಟ್ಸ್ ನಿರ್ದೇಶನದ ಈ ಚಿತ್ರದಲ್ಲಿ ಫ್ಯಾಂಟಸಿಯನ್ನು ಬಯಸುವ ಪ್ರೇಕ್ಷಕರಿಗೆ ಬೇಕಾದ ಎಲ್ಲ ಸರಕುಗಳೂ ಇವೆ. ಸೈನ್ಸ್ ಫಿಕ್ಷನ್ ಹೆಸರಿನಲ್ಲಿ ಗ್ರಾಫಿಕ್ ಬಲದ ಮೇಲೆಯೇ ನಿರ್ಮಾಣವಾಗುವ ಇಂತಹ ಚಿತ್ರಗಳ ಅಂತಿಮಗುರಿ ಮನರಂಜನೆಯೇ. ಪೀಟರ್ ಪಾರ್ಕರ್/ಸ್ಪೈಡರ್ ಮ್ಯಾನ್ ಪಾತ್ರದಲ್ಲಿ ಟಾಮ್ ಹಾಲಂಡ್ ಪ್ರೇಕ್ಷಕರ ಮನರಂಜಿಸುತ್ತಾನೆ.

ಹಾಲಿವುಡ್‌ನಲ್ಲಿ ಯಾವುದೇ ಚಿತ್ರವಾದರೂ ಯೋಜನೆಯಿಲ್ಲದೆ ಹೊರಬರುವುದಿಲ್ಲ. 'ಸ್ಪೈಡರ್‌ಮ್ಯಾನ್: ಹೋಮ್ ಕಮಿಂಗ್'ನ ಶೂಟಿಂಗ್ ನಡೆಯುತ್ತಿದ್ದಾಗಲೇ, ಅಂದರೆ 2016ರಲ್ಲೇ ಈ ಎರಡನೇ ಭಾಗದ ಚಿತ್ರ ರಚಿಸಲು ಮಾತುಕತೆ ಶುರುವಾಗಿತ್ತು. ಮೊದಲ ಚಿತ್ರದ ನಟ–ನಿರ್ದೇಶಕರು ಒಪ್ಪಿದ ಬಳಿಕ ಕಳೆದ ವರ್ಷ ಜುಲೈನಲ್ಲಿ ಶೂಟಿಂಗ್ ಆರಂಭವಾಗಿ ಅಕ್ಟೋಬರ್‌ನಲ್ಲಿ ಮುಕ್ತಾಯ ಕಂಡಿತು. ಇಂಗ್ಲೆಂಡ್, ಜೆಕ್ ರಿಪಬ್ಲಿಕ್, ಇಟಲಿ, ನ್ಯೂಯಾರ್ಕ್ ಮುಂತಾದೆಡೆಗಳ ಸುಂದರ ಹೊರಾಂಗಣದಲ್ಲಿ ಚಿತ್ರೀಕರಣ ನಡೆದಿದೆ. ಜೂನ್ 26ರಂದು ಹಾಲಿವುಡ್‌ನಲ್ಲಿ ಪ್ರೀಮಿಯರ್ ಶೋ ನೋಡಿದ ಎಲ್ಲರೂ ನಿರ್ದೇಶಕರ ಕೈಚಳಕವನ್ನು ಮುಕ್ತಕಂಠದಿಂದ ಹೊಗಳಿದ್ದಾರೆ. ಈ ಥ್ರೀಡಿ ಸಿನಿಮಾ ಇಂಗ್ಲಿಷ್ ಮತ್ತು ತಮಿಳು ಭಾಷೆಗಳಲ್ಲಿ ತೆರೆಗೆ ಬಂದಿದೆ. ■

# ಸೋನಂ ಫ್ಲ್ಯಾಷ್‌ಬ್ಯಾಕ್

ಬಾಲಿವುಡ್‌ನ ಸಹಜ ಸುಂದರಿ ಸೋನಂ ಕಪೂರ್, ನಟಿಸಿರುವ ಹೊಸ ಚಿತ್ರದ ಬಿಡುಗಡೆ ಮುಂದಕ್ಕೆ ಹೋಗುತ್ತಲೇ ಇದೆ. 'ದಿ ಜೋಯಾ ಫ್ಯಾಕ್ಟರ್' ಸಿನಿಮಾ ರೆಡಿಯಾಗಿ ಆಗಲೇ ಮೂರು ತಿಂಗಳಾಗಿದೆ. ಮೊದಲು ಏಪ್ರಿಲ್‌ನಲ್ಲಿ ಬಿಡುಗಡೆ ಎಂದವರು. ಪೋಸ್ಟ್ ಪ್ರೊಡಕ್ಷನ್ ಕೆಲಸಗಳು ಮುಗಿಯದೆ ಜೂನ್‌ಗೆ ಮುಂದಕ್ಕೆ ಹೋಯಿತು. ಈಗ ವಿಶ್ವಕಪ್ ಕ್ರಿಕೆಟ್‌ನಿಂದಾಗಿ ಚಿತ್ರದ ಬಿಡುಗಡೆಯನ್ನು ಸೆಪ್ಟೆಂಬರ್ 20ಕ್ಕೆ ಮುಂದೂಡಲಾಗಿದೆ. 'ದಿ ಜೋಯಾ ಫ್ಯಾಕ್ಟರ್'ಗೂ ಕ್ರಿಕೆಟ್‌ಗೂ ಸಂಬಂಧ ಇರುವುದು ಚಿತ್ರದ ಕುರಿತು ಪ್ರೇಕ್ಷಕರಲ್ಲಿ ನಿರೀಕ್ಷೆ ಹೆಚ್ಚಿಸಿದೆ. ಅನುಜಾ ಚೌಹಾಣ್ ಬರೆದಿರುವ ಕಾದಂಬರಿ ಆಧಾರಿತ ಚಿತ್ರವಿದು. ಚಿತ್ರದ ನಾಯಕ ಭಾರತ ಕ್ರಿಕೆಟ್ ತಂಡದ ಕ್ಯಾಪ್ಟನ್. ನಾಯಕಿಗೆ ಆ್ಯಡ್ ಏಜೆನ್ಸಿಯೊಂದರಲ್ಲಿ ಕೆಲಸ. ಆಕೆ ಹೇಗೆ ಭಾರತ ತಂಡ ವಿಶ್ವಕಪ್ ಗೆಲ್ಲಲು ಸ್ಫೂರ್ತಿಯಾಗುತ್ತಾಳೆ ಎನ್ನುವುದು ಚಿತ್ರಕಥೆ.

'ತೇರೆ ಬಿನ್ ಲಾಡೆನ್' ಎನ್ನುವ ಯಶಸ್ವೀ ಚಿತ್ರದ ನಿರ್ದೇಶಕ ಅಭಿಷೇಕ್ ಶರ್ಮಾ 'ದಿ ಜೋಯಾ ಫ್ಯಾಕ್ಟರ್' ನಿರ್ದೇಶಿಸಿದ್ದಾರೆ. ಮಲಯಾಳಂ ನಟ, ಮಮ್ಮುಟ್ಟಿಯ ಮಗ ದುಲ್ಕರ್ ಸಲ್ಮಾನ್ ಇದೇ ಮೊದಲ ಬಾರಿಗೆ ಸೋನಂ ಜೊತೆಗೆ ಹೀರೊ ಆಗಿದ್ದಾನೆ.

ಇದೇ ಸಂದರ್ಭದಲ್ಲಿ ಸೋನಂ ತನ್ನ ಸಿನಿಮಾ ಬದುಕಿನ ಹಳೆಯ ನೆನಪುಗಳನ್ನೂ ಕೆದಕಿದ್ದಾಳೆ. ಆಕೆ 'ಖೂಬ್‌ಸೂರತ್' ಸಿನಿಮಾಕ್ಕೆ ಆಯ್ಕೆಯಾದಾಗ ನಾಯಕ ಪಾತ್ರ ವಹಿಸಲು ಯಾರೂ ಒಪ್ಪಲಿಲ್ಲವಂತೆ. 'ಕೊನೆಗೆ ಪಾಕಿಸ್ತಾನದಿಂದ ಫವಾದ್ ಖಾನ್ ಎಂಬ ಹೀರೊನನ್ನು ಕರೆತರಬೇಕಾಯಿತು' ಎಂದು ಆಕೆ ಸ್ವತಃ ಬಹಿರಂಗಪಡಿಸಿದ್ದಾಳೆ. 'ಚಿತ್ರದ ಹೆಸರೇ ಖೂಬ್‌ಸೂರತ್ ಎಂದು ಇದ್ದುದರಿಂದ ಅದು ಮಹಿಳಾಪ್ರಧಾನ ಸಿನಿಮಾ ಎಂದು ಭಾವಿಸಿ ಯಾವ ಹೀರೊಗಳು ಬರಲಿಲ್ಲ. 2010ರಲ್ಲಿ 'ಆಯಿಷಾ' ಮಾಡಿದಾಗಲೂ ಹೀಗೆಯೇ ಆಗಿತ್ತು. ಮಹಿಳಾ ಪ್ರಧಾನ ಸಿನಿಮಾಗಳನ್ನು ಮಾಡುವ ಕಷ್ಟ ನಿಮಗೆ ಗೊತ್ತಿಲ್ಲ. ಎಲ್ಲರೂ ತಾರಾಕುಟುಂಬದಿಂದ ಬಂದವರಿಗೆ ಅವಕಾಶ ಸುಲಭ ಎನ್ನುತ್ತಾರೆ. ಆದರೆ ಪರಿಸ್ಥಿತಿ ಹಾಗಿಲ್ಲ. ನಿಮಗೆ ಪ್ರತಿಭೆ ಇದ್ದರೆ ಮಾತ್ರ ಇಲ್ಲಿ ಉಳಿದುಕೊಳ್ಳುತ್ತೀರಿ' ಎಂದು ಅನಿಲ್ ಕಪೂರ್ ಮಗಳಾದ ಸೋನಂ ಸಂದರ್ಶನವೊಂದರಲ್ಲಿ ತನ್ನ ಅನಿಸಿಕೆಗಳನ್ನು ಬಿಚ್ಚಿಟ್ಟಿದ್ದಾಳೆ. ಅಂದ ಹಾಗೆ ಹೊಸ ಸಿನಿಮಾದಲ್ಲಿ ದುಲ್ಕರ್ ಸಲ್ಮಾನ್ ನಟನೆಯನ್ನು ಸೋನಂ ಮುಕ್ತಕಂಠದಿಂದ ಶ್ಲಾಘಿಸಿದ್ದಾಳೆ. 'ಆತ ಒಳ್ಳೆಯ ನಟ. ನಮ್ಮ ಜೋಡಿಯೂ ಚೆನ್ನಾಗಿದೆ' ಎಂದಿದ್ದಾಳೆ.

■ ಬಿಂದು

